# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:– ಶ್ರೀ ನಾಗಲಿಂಗಯ್ಯ, ಅಂದಿನ ಪ್ರಥಮ ದರ್ಜೆ ಸಹಾಯಕರು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ, ಕಚೇರಿಯಲ್ಲಿಯ ಹಣ ದುರುಪಯೋಗದ ಬಗ್ಗೆ ಶಿಸ್ತು ಕ್ರಮ.

**ಓದಲಾಗಿದೆ:–**

1. ಸರ್ಕಾರದ ಆದೇಶ ಸಂಖ್ಯೆ: ಕೃತೋಇ 6 ಕೃಪವಿ 97, ದಿನಾಂಕ: 10–08–2000.
2. ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂಖ್ಯೆ: 1093/2000ರ ಮೇಲಿನ ದಿನಾಂಕ: 28–02–2011ರ ತೀರ್ಪು.

**ಪ್ರಸ್ತಾವನೆ:–**

ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ: 10–08–2000ರ ಸರ್ಕಾರದ ಆದೇಶದಲ್ಲಿ, ಶಿಡ್ಲಘಟ್ಟ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯಲ್ಲಿನ ಸಿಬ್ಬಂದಿಯವರ ವೇತನವನ್ನು ಬಟವಾಡೆ ಹಣ ದುರುಪಯೋಗಪಡಿಸಿಕೊಂಡಿದ್ದಲ್ಲದೇ, ಎ.ಸಿ.ಬಿಲ್ಲುಗಳಿಂದ ಖಜಾನೆಯಿಂದ ಹಣವನ್ನು ತೆಗೆದುಕೊಂಡ ಅಂದಿನ ಸಹಾಯಕ ಕೃಷಿ ನಿರ್ದೇಶಕರಾದ ಶ್ರೀ ಜಿ. ಚೆಲುವರಾಜು, ಹಾಗೂ ಅಂದಿನ ಪ್ರಥಮ ದರ್ಜೆ ಸಹಾಯಕರಾದ ಶ್ರೀ ನಾಗಲಿಂಗಯ್ಯರವರ ಮೇಲೆ ತಲಾ ಒಟ್ಟು 5 ಆರೋಪಗಳಿದ್ದು, ಅವುಗಳ ವಿವರ ಕೆಳಕಂಡಂತಿವೆ.

1. ನಗದು ಪುಸ್ತಕವನ್ನು ಬರೆಯದೆ ಇರುವುದು.
2. ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ನೌಕರರ ರೂ. 3800/–ಗಳ ತುಟ್ಟಿ ಭತ್ಯೆಯನ್ನು ಡ್ರಾ ಮಾಡಿ, ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಪಡೆದುಕೊಳ್ಳದೇ ದುರುಪಯೋಗ ಪಡಿಸಿಕೊಂಡಿರುವುದು.
3. ಸಿಬ್ಬಂದಿಯವರ ವೇತನವನ್ನು ಖಜಾನೆಯಿಂದ ಡ್ರಾ ಮಾಡಿ ಅದನ್ನು ಸಿಬ್ಬಂದಿಯವರಿಗೆ ಹಂಚದೇ ಇರುವುದು.
4. ಡಿ.ಸಿ. ಬಿಲ್ಲುಗಳ ಮೂಲಕ ಒಟ್ಟು ರೂ. 18,333/–ಗಳನ್ನು ಖಜಾನೆಯಿಂದ ಡ್ರಾ ಮಾಡಿ ಸದರಿ ಹಣವನ್ನು ಸಂಬಂಧಿಸಿದವರಿಗೆ ಪಾವತಿ ಮಾಡದೇ ಇರುವುದು.
5. ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಶಿಡ್ಲಘಟ್ಟದಲ್ಲಿ ಆರೋಪಿತ ಅಧಿಕಾರಿ/ನೌಕರರು ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೀಜ ಮತ್ತು ನಿಧಿ ಯೋಜನೆಯಡಿಯಲ್ಲಿ, ಸದರಿ ಖಾತೆಯಲ್ಲಿ ಚೆಕ್ ಪುಸ್ತಕದಲ್ಲಿ ಚೆಕ್ ಲೀಪನ್ನು ಉಪಯೋಗಿಸದೇ, ಸಹಾಯಕ ಕೃಷಿ ನಿರ್ದೇಶಕರು, ಶಿಡ್ಲಘಟ್ಟ ಇವರೊಂದಿಗೆ ಶಾಮೀಲಾಗಿ, ಬೇರೆ ಚೆಕ್ ಲೀಫನ್ನು ಉಪಯೋಗಿಸಿ, ರೂ. 15,000/– ಹಣವನ್ನು ಬ್ಯಾಂಕನಿಂದ ಪಡೆದುಕೊಂಡು, ಸ್ವಂತ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಿರುವುದು.

ಈ ಮೇಲ್ಕಂಡ ಆರೋಪಗಳ ಬಗ್ಗೆ ಶ್ರೀ. ನಾಗಲಿಂಗಯ್ಯ, ಹಿಂದಿನ ಪ್ರಥಮ ದರ್ಜೆ ಸಹಾಯಕರು ಇವರಿಗೆ ದೋಷಾರೋಪಣಾ ಪಟ್ಟಿ ಜಾರಿಮಾಡಲಾಗಿದ್ದು, ಅವರು ತಮ್ಮ ಮೇಲಿನ ಆರೋಪವನ್ನು ಅಲ್ಲಗೆಳೆದುದರಿಂದ ಸದರಿ ಪ್ರಕರಣದಲ್ಲಿಯ ಸತ್ಯಾ–ಸತ್ಯತೆಯನ್ನು ಕಂಡುಕೊಳ್ಳುವ ಉದ್ದೇಶದಿಂದ ಶ್ರೀ ಹೆಚ್. ಉಮೇಶ ಶೆಟ್ಟಿ, ನಿವೃತ್ತ ನ್ಯಾಯಾಧೀಶರನ್ನು

ವಿಚಾರಣಾಧಿಕಾರಿಯಾಗಿ ನೇಮಿಸಲಾಗಿ, ವಿಚಾರಣಾಧಿಕಾರಿಯವರು ಸದರಿ ಇಬ್ಬರೂ ಅಧಿಕಾರಿ ನೌಕರರ ಮೇಲೆ ಮಾಡಿರುವ ಆರೋಪಗಳು ಸಾಬೀತಾಗಿದೆ ಎಂದು ವರದಿ ನೀಡಿದ್ದರ ಹಿನ್ನೆಲೆಯಲ್ಲಿ, ಶ್ರೀ ಚೆಲುವರಾಜು ಸಹಾಯಕ ಕೃಷಿ ನಿರ್ದೇಶಕರು ಶಿಡ್ಲಘಟ್ಟ, ಮತ್ತು ಶ್ರೀ ನಾಗಲಿಂಗಯ್ಯ, ಹಿಂದಿನ ಪ್ರಥಮ ದರ್ಜೆ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಡ್ಲಘಟ್ಟ, ಇವರಿಗೆ ಕರ್ನಾಟಕ ನಾಗರೀಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 8(iv) ರನ್ವಯ ಸದರಿಯವರೀರ್ವರು ದುರುಪಯೋಗಪಡಿಸಿಕೊಂಡಿದ್ದ ಒಟ್ಟು ಹಣ ರೂ. 42,335/- ಪೈಕಿ ಪ್ರತಿ ಒಬ್ಬರಿಗೆ ಸಮನಾಗಿ, ರೂ. 21,168/- ಶೇಕಡಾ 12ರ ಬಡ್ಡಿ ಸೇರಿಸಿ, ಏಕಗಂಟಿನಲ್ಲಿ ವಸೂಲು ಮಾಡಲು, ಹಾಗೂ ಶ್ರೀ ನಾಗಲಿಂಗಯ್ಯನವರು ಎಸಗಿರುವ ತಪ್ಪಿಗೆ ಅವರು ಪಡೆಯುತ್ತಿರುವ ಮೂಲ ವೇತನದಲ್ಲಿ 3 ಹಂತ ವಾರ್ಷಿಕ ಬಡ್ತಿಯನ್ನು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 8(iv) (a) ರನ್ವಯ ಅವರು ನಿವೃತ್ತಿಯಾಗುವವರೆಗೆ ಕಡಿಮೆ ಮಾಡಲು (ಇಳಿಸಲು) ಆದೇಶಿಸಲಾಗಿತ್ತು.

ಸದರಿ ಮೇಲ್ಕಂಡ ದಂಡನೆಯ ಆದೇಶದ ವಿರುದ್ಧ ಶ್ರೀ ನಾಗಲಿಂಗಯ್ಯ, ಹಿಂದಿನ ಪ್ರಥಮ ದರ್ಜೆ ಸಹಾಯಕರು, ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂ. 1093/2000ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 28-02-2011ರಂದು ಅಂತಿಮ ತೀರ್ಪು ನೀಡಿದ್ದು, ಆರೋಪಿ ನೌಕರರಿಗೆ ವಿಧಿಸಿದ ದಂಡನೆಯನ್ನು ಮಾರ್ಪಡಿಸಿದೆ. ಅದರ ವಿವರ ಈ ಕೆಳಕಂಡಂತಿದೆ.

(i) The application is allowed partly ,

(ii) The Penalty of recovery of Rs. 21,168/- along with 12% interest imposed on the Applicant under Rule 8(iv) of the CC& A rules 1957 in the impugned order No. **ಕೃತೋಇ 6 ಕೃಪವಿ 97, ದಿನಾಂಕ: 10-08-2000** is ordered to be modified as recovery of Rs. 698/- only.

(iii) The penalty of reduction of three stages in the time scale of the Applicant till the date of retirement under Rule 8(iv-a) of the CCA rules 1957, imposed on the Applicant in the Impugned order dated 10-08-2000 is ordered to be modified as reduction of two stages in the time scale of the Applicant for a period from

S11

10-08-2000 till the date of his retirement on Superannuation, the applicant will not earn increment of Pay during such period.

(iv) The authority competent to order reinstenment from suspension of the Applicant is directed to consider and pass a specific order regarding proportion of full pay and allowances the applicant is entitled during the period of his Suspension as per the provision of Rules 100(5), 100(7) and subject to the provisions of Rule 100(8) and 100(9) of the KCSRs.

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂ. 1093/2000ರ ದಿನಾಂಕ: 28-02-2011ರಲ್ಲಿ ನೀಡಿದ ಮೇಲ್ಕಂಡ ತೀರ್ಪಿನಲ್ಲಿ ಆದೇಶಿಸಿರುವಂತೆ ಅನುಷ್ಠಾನ ಮಾಡಲು ನಿರ್ಧರಿಸಿ; ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 26 ಕೃಪರಿ 2000**
**ಬೆಂಗಳೂರು, ದಿನಾಂಕ: 18- 06-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ನಾಗಲಿಂಗಯ್ಯ, ಹಿಂದಿನ ಪ್ರಥಮ ದರ್ಜೆ ಸಹಾಯಕರು, ಸಹಾಯಕ ಕೃಷಿ ನಿರ್ದೇಶಕರ ಕಚೇರಿ, ಶಿಡ್ಲಘಟ್ಟ, ಇವರಿಗೆ ದಿನಾಂಕ: 10-08-2000ರ ಸರ್ಕಾರದ ಆದೇಶ ಸಂಖ್ಯೆ: ಕೃತೋಇ 6 ಕೃಪವಿ 97ರಲ್ಲಿ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ, ಸದರಿ ಪ್ರಕರಣದಲ್ಲಿ ಕರ್ನಾಟಕ **ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂ**: 1093/2011ರ ದಿನಾಂಕ: 28-02-2011ರಲ್ಲಿ ನೀಡಿದ ತೀರ್ಪಿನಲ್ಲಿಯ ಆದೇಶದಂತೆ ಈ ಕೆಳಕಂಡಂತೆ ಅನುಷ್ಠಾನ ಮಾಡಲು ಆದೇಶಿಸಿದೆ.

1) ಕರ್ನಾಟಕ ನಾಗರಿಕ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಯ ನಿಯಮ 8(iv)ರಂತೆ ಸದರಿ ಅಧಿಕಾರಿಯವರು ದುರುಪಯೋಗ ಪಡಿಸಿಕೊಂಡಿರುವ, ರೂ. 21,168/-ನ್ನು ಶೇಕಡಾ 12ರ ಬಡ್ಡಿಯೊಂದಿಗೆ ವಸೂಲು ಮಾಡುವ ದಂಡನೆ ವಿಧಿಸಿರುವುದನ್ನು ಮಾರ್ಪಡಿಸಿ, ಅವ್ವರಿಂದ ಕೇವಲ ರೂ. 698/- (ಒಟ್ಟು ರೂ.ಆರುನೂರಾ ತೊಂಬತ್ತೆಂಟು) ಗಳನ್ನು ಮಾತ್ರ ವಸೂಲು ಮಾಡುವುದು.

2) ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ)

ನಿಯಮಾವಳಿಯ ನಿಯಮ 8(iv-a)ರಂತೆ ಆರೋಪಿತ ಅಧಿಕಾರಿಯರ ಕಾಲಿಕ ವೇತನ ಶ್ರೇಣಿಯಲ್ಲಿ ಮೂರು ಹಂತಗಳನ್ನು ಕೆಳಗಿಳಿಸಿರುವ ದಿನಾಂಕ:10-08-2000ರ ದಂಡನಾದೇಶವನ್ನು ಮಾರ್ಪಡಿಸಿ, ಅರ್ಜಿದಾರರ ಕಾಲಿಕ ವೇತನ ಶ್ರೇಣಿಯ ಎರಡು ಹಂತಗಳನ್ನು ದಿನಾಂಕ:10-08-2000ರಿಂದ ಅವರು ನಿವೃತ್ತಿಯಾಗುವವರೆಗೆ ಅಥವಾ ವಯೋ ನಿವೃತ್ತಿಯಾಗುವರೆಗೆ ಕೆಳಗಿಳಿಸಲು ಆದೇಶಿಸಿದೆ. ಈ ಮೇಲ್ಕಂಡ ಅವಧಿಯಲ್ಲಿ ಆರೋಪಿತ ನೌಕರರು ಯಾವುದೇ ವೇತನ ಬಡ್ತಿಗಳನ್ನು ಪಡೆಯಲು ಅರ್ಹರಿರುವುದಿಲ್ಲ.

3) **ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ 100(5), ಮತ್ತು 100(7)ರಂತೆ ಆರೋಪಿತ ಅಧಿಕಾರಿಯವರು ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 100(8) ಮತ್ತು 100(9)ರಲ್ಲಿಯ ನಿಯಮಗಳ ಪಾಲನೆಯೊಂದಿಗೆ ಸಕ್ರಮಗೊಳಿಸಲಾಗಿದ್ದು, ಸದರಿ ಅವಧಿಯಲ್ಲಿ ಅವರು ಪೂರ್ಣ ವೇತನ ಮತ್ತು ಭತ್ಯೆಗಳನ್ನು ಪಡೆಯಲು ಅರ್ಹರಿರುತ್ತಾರೆ.**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1. ಮಹಾಲೇಖಾಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4. ಜಂಟಿ ಕೃಷಿ ನಿರ್ದೇಶಕರು, ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆ.
5. ಸಹಾಯಕ ಕೃಷಿ ನಿರ್ದೇಶಕರು, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ.
6. ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿ.ಡಿ.ಎ ಶಾಪಿಂಗ್ ಕಾಂಪ್ಲೆಕ್ಸ್, ಇಂದಿರಾ ನಗರ ಬೆಂಗಳೂರು.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ,
8. ಸರ್ಕಾರದ ಉಪ ಕಾರ್ಯದರ್ಶಿ-1,ರವರ ಆಪ್ತ ಸಹಾಯಕರು, ಕೃಷಿ ಇಲಾಖೆ,
9. ಸಂಬಂಧಪಟ್ಟ ಅಧಿಕಾರಿಯವರಿಗೆ (ಕೃಷಿ ಆಯುಕ್ತರ ಮೂಲಕ)
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.